Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 59/2016

ಪ್ರಾ.ಸಾ. 1 ಚಾ.ಸಾ 2

| | | |
|---|---|---|
| ಹೆಸರು | : | ರಾಜುಗೌಡ |
| ತಂದೆಯ ಹೆಸರು | : | ನಾಗಪ್ಪ ಗೌಡ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಅರಕೇರಾ (ಬಿ) |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 11-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನ್ನ ಮೃತ ಸಣ್ಣಲಕ್ಷ್ಮಣ ರವರ ಪರಿಚಯ ಇತ್ತು. ಚಾಸಾ-3 ರವರ ಪರಿಚಯ ಇರುತ್ತದೆ. ಚಾಸಾ-1 ರವರ ಪರಿಚಯ ಇತ್ತು ಈಗ ಅವರು ತೀರಿಕೊಂಡಿರುತ್ತಾರೆ. 6-7 ವರ್ಷಗಳಿಂದೆ ಮೃತ ಪಟ್ಟಿರುತ್ತಾರೆ.

2. ಈಗ್ಗೆ 10 ವರ್ಷದ ಹಿಂದೆ ನನ್ನನ್ನು ಹಾಗೂ ಚಾಸಾ-3 ರವರನ್ನು ಉಳಂಡಗೇರಾ ಗ್ರಾಮದ ಭೀಮಾ ನದಿಯ ನೀರಿನಲ್ಲಿ ಬರಮಾಡಿಕೊಂಡು, ಪೊಲೀಸರು ನನಗೆ ಹಬ್ಬೆಟ್ಟಿನ ಗುರುತು ಹಾಕು ಅಂತಾ ಹೇಳಿದ್ದರಿಂದ ಒಂದು ದಾಖಲೆಗೆ ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ, ಹೆಣ ತೆಗೆದ ಶವ ಪಂಚನಾಮೆಯನ್ನು **ನಿ.ಪಿ.1** ಎಂದು ಗುರುತಿಸಲಾಯಿತು ಅದರಲ್ಲಿ ಸಾಕ್ಷಿಯು ಹೆಬ್ಬಟ್ಟಿನ ಗುರುತು ಹಾಕಿರುತ್ತೇನೆ ಎಂದು ನುಡಿದಿರುತ್ತಾರೆ. ಆ ಕಾಲಕ್ಕೆ ತೆಗೆದಂತಹ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು **ನಿ.ಪಿ.2** ಎಂದು ಗುರುತಿಸಲಾಯಿತು.

3. ಭೀಮಾ ನದಿಯ ಉಳಂಡಗೇರಾ ಗ್ರಾಮದ ಸೀಮೆಯ ನೀರಿನ ದಂಡೆಯಲ್ಲಿ ಕರೆಯಿಸಿ ಅಲ್ಲಿ ಮೃತ ಸಣ್ಣ ಲಕ್ಷ್ಮಣನ 11.00 ಗಂಟೆಗೆ ಶವಪಂಚನಾಮೆಯನ್ನು

ಮಾಡಿರುತ್ತಾರೆ, ಅದನ್ನು **ನಿ.ಪಿ.3** ಎಂದು ಗುರುತಿಸಲಾಯಿತು ಆ ಕಾಲಕ್ಕೆ 2 ಭಾವಚಿತ್ರಗಳನ್ನು ತೆಗೆದು ಅವುಗಳನ್ನು **ನಿ.ಪಿ.4 ಮತ್ತು 5** ಎಂದು ಗುರುತಿಸಲಾಯಿತು. ಪೊಲೀಸರು ನನ್ನನ್ನು ಮೃತ ನ ಮೈಮೇಲಿನ ಬಟ್ಟೆಗಳ ಪಂಚನಾಮೆಗೆ ಪುನಃ ನನ್ನನ್ನು ಠಾಣೆಗೆ ಕರೆಯಿಸಿರುತ್ತಾರೆ. ಮೃತನ ಮೈಮೇಲಿನ ಬಟ್ಟೆಗಳ ಪಂಚನಾಮೆಯನ್ನು **ನಿ.ಪಿ.6** ಎಂದು ಗುರುತಿಸಲಾಯಿತು. ಅದರಲ್ಲಿ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ನಿ.ಪಿ.1, 3, 6 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಪೊಲೀಸರು ನನ್ನನ್ನು ಕರೆಯಿಸಿರುತ್ತಾರೆ ನಾನು ಘಟನೆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಘಟನೆ ಬಗ್ಗೆ ಈಗ ನನಗೆ ನೆನಪಿಗೆ ಬರುತ್ತಿಲ್ಲ ಮತ್ತು ಪುರವಣಿ ಹೇಳಿಕೆ ನೀಡಿರುವುದಿಲ್ಲ.

**(ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ</u>**

4. ದಿಃ 19.12.2015 ರಂದು ಸಾಯಂಕಾಲ 4.45 ರಿಂದ 5.15 ರವರಗೆ ನನ್ನನ್ನುಮತ್ತು ಚಾಸಾ-3 ರವರನ್ನು ಉಳಂಡಗೇರಾ ಗ್ರಾಮದ ಭೀಮಾ ನದಿಯ ನೀರಿನಲ್ಲಿ ಕರೆಯಿಸಿ ಅಲ್ಲಿ ಚಾಸಾ-1 ರವರ ತೋರಿಸಿದ ಗುನ್ನೆ ಸ್ಥಳವನ್ನು ತೋರಿಸಿ ಅಲ್ಲಿ 10 ರಿಂದ 15 ಕೆ ಜಿ ತೂಕ ಕಲ್ಲನ್ನು ನಿ.ಪಿ.1 ರಂತೆ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ನಿ.ಪಿ.2 ರಂತೆ ಭಾವಚಿತ್ರ ಪಡೆದಿರುತ್ತಾರೆ ಎಂದರೆ ಸರಿ.

5. ನಂತರ ದಿಃ 19.12.2015 ರಂದು ಸಾಯಂಕಾಲ 5.30-7.00 ಗಂಟೆಯವರೆಗೆ ನನ್ನನ್ನು ಮತ್ತು ಚಾಸಾ-3 ರವರನ್ನು ಉಳಂಡಗೇರಾ ಗ್ರಾಮದ ಭೀಮಾ ನದಿಯ ನೀರಿನಲ್ಲಿ ನನ್ನನ್ನು ಹಾಗೂ ಚಾಸಾ-3 ಕರೆಯಿ ಸಿರುತ್ತಾರೆ ಎಂದರೆ ಸರಿ. 4 ಫೀಟ ಆಳದಲ್ಲಿ ಮೃತ ಸಣ್ಣ ಲಕ್ಷ್ಮಣನ ಕೊಲೆ ಸಂಬಂಧಿಸಿದಂತೆ ನನ್ನ ಸಮಕ್ಷಮ ಶವಪಂಚನಾಮೆಯನ್ನು ನಿ.ಪಿ.3 ರಂತೆ ಮಾಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ನಿ.ಪಿ.4 ಮತ್ತು 5 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿ.

6. ದಿಃ 20.12.2016 ರಂದು ಬೆಳಿಗ್ಗೆ 9.30-10.00 ಗಂಟೆಯವರೆಗೆ ನನ್ನ ಮತ್ತು ಚಾಸಾ-3 ರವರನ್ನು ಯಾದಗಿರಿ ಗ್ರಾಮೀಣ ಪೊಲೀಸ ಠಾಣಾದ ಆವರಣದಲ್ಲಿ ಕರೆಯಿಸಿರುತ್ತಾರೆ ಎಂದರೆ ಸರಿ. ಚಾಸಾ-29 ರವರು ಮೃತರ ಪಿ.ಎಮ್. ಆದ ಮೇಲೆ 4 ಬಟ್ಟೆಗಳಾದ 1) ಒಂದು ನಿಲಿ ಬಣ್ಣದ ಜೀನ್ಸ ಪ್ಯಾಂಟ್ 2) ಒಂದು ನೀಲಿ ಮತ್ತು ನಾಶಿ ಕಲರಿನ ಶರ್ಟ 3) ಒಂದು ಹಸಿರು ಬಣ್ಣದ ಟಿಶರ್ಟ 4) ಒಂದು ಅಂಡರವೇರ್ ಇವುಗಳನ್ನು ನಿ.ಪಿ.6 ರಂತೆ ಪಂಚನಾಮೆಯನ್ನು ಮಾಡಿ, ಮೃತನ ಮೈಮೇಲಿನ 4 ಬಟ್ಟೆಗಳನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿದಾರರಿಗೆ ಈಗ ಕಲ್ಲನ್ನು ತೋರಿಸಲಾಗಿದ್ದು ಅದೇ ಇರಬಹುದು ಎಂದು ನುಡಿಯುತ್ತಾರೆ, ಅದನ್ನು **ಮು.ಮಾ.1** ಎಂದು ಗುರುತಿಸಲಾಯಿತು. ಒಂದು ನಿಲಿ ಬಣ್ಣದ ಜೀನ್ಸ ಪ್ಯಾಂಟನ್ನು **ಮು.ಮಾ.2,** ಒಂದು ನೀಲಿ ಮತ್ತು ನಾಶಿ ಕಲರಿನ ಶರ್ಟ **ಮು.ಮಾ.3,** ಒಂದು ಹಸಿರು ಬಣ್ಣದ ಟಿಶರ್ಟ **ಮು.ಮಾ.4,** ಒಂದು ಅಂಡರವೇರ್ **ಮು.ಮಾ.5** ಎಂದು ಗುರುತಿಸಲಾಯಿತು.

7. ದಿಃ 13.12.2015 ರಂದು ಬೆಳಿಗ್ಗೆ 10.00 ಗಂಟೆಗೆ ಮೃತ ಸಣ್ಣಲಕ್ಷ್ಮಣ ಚಾಸಾ-18 ರವರ ಜಮೀನಿಗೆ ಗಳೆ ಹೊಡೆಯಲು ಹೋಗಿದ್ದನ್ನು ಅಂದರೆ ಸರಿ. ತಾಂಡಾದಲ್ಲಿ ಪಾರ್ಟಿ ಮಾಡಲು ಹೋಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಮೃತ ಸಣ್ಣ ಲಕ್ಷ್ಮಣ ತುಂಬಾ ಮಧ್ಯಸೇವನೆ ಮಾಡಿ ಬನ್ನಟ್ಟಿ ಗ್ರಾಮದ ಸೇವಲಾಲ ಗುಡಿಯ ಕಟ್ಟೆಯ ಮೇಲೆ ಮಲಗಿಕೊಂಡಿದ್ದ ಎಂದರೆ ಸರಿಯಲ್ಲ. 1 ರಿಂದ 5 ಜನ ಆರೋಪಿತರು ಇದೇ ಒಳ್ಳೆಯ ಅವಕಾಶವೆಂದು ಆತನ ಮೇಲೆ ಸೇಡು ತಿರಿಸಿಕೊಳ್ಳಬೇಕು ಎಂದ ಸಂಚು ಹಾಕಿ 6 ನೇ ಆರೋಪಿಯ ಪ್ರಚೋದನೆಯ ಮೆರೆಗೆ ಆರೋಪಿತರು ಮೃತ ಸಣ್ಣಲಕ್ಷ್ಮಣನನ್ನು ಹಳೇ ವೈಷಮ್ಯೆದಿಂದ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು ರಾತ್ರಿ 12.15 ಕ್ಕೆ ಮೃತ ಸಣ್ಣಲಕ್ಷ್ಮಣನಿಗೆ 3 ನೇ ಆರೋಪಿ ಹಿಡಿಗಾತ್ರದ ಕಲ್ಲಿನಿಂದ ಜೋರಾಗಿ ಹೊಡೆದಿದ್ದರಿಂದ ಆತ ಕೆಳಗಡೆ ಬಿದ್ದಾಗ 5 ಮತ್ತು 6 ನೇ ಅರೋಪಿತರು ಮೃತ ಸಣ್ಣಲಕ್ಷ್ಮಣನ ಕೈ, ಕಾಲು ಹಿಡಿದು, 3 ನೇ ಆರೋಪಿತನು ಎದೆಯ ಿಮೇಲೆ ಕುಳಿತು ಕಲ್ಲಿನಿಂದ ಮುಖದ ಮೇಲೆ ಹೊಡೆದು, ಕುತ್ತಿಗೆಯನ್ನು ಹಿಚುಗಿ ಕೊಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 3, 5 , 6 ರವರು ಶವವನ್ನು ಸಾಕ್ಷಿ ನಾಶಪಡಿಸುವ

ಉದ್ದೇಶದಿಂದ ಭೀಮಾ ನದಿಯ ನೀರಿನಲ್ಲಿಹಾಕಿ ಶವದ ಮೇಲೆ ಒಂದು ದೊಡ್ಡ ಕಲ್ಲನ್ನು ಇಟ್ಟು, ಸಾಕ್ಷಿ ನಾಶಪಡಿಸುವ ಉದ್ದೇಶದಿಂದ ಶವವನ್ನು ಮುಚ್ಚಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈಗ ವಿವರವಾಗಿ ಓದಿ ಹೇಳಿದ ನಿ.ಪಿ.7 ರಂತೆ ಹೇಳಿಕೆ ಮತ್ತು ನಿ.ಪಿ.8 ರಂತೆ ಮರುಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.7 ಮತ್ತು 8 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1, 2, 4 ಮತ್ತು 5 ನೇ ಆರೋಪಿತರ ಪರವಾಗಿ ಶ್ರೀ. ಸಿ.ಕೆ.ಹೆಚ್. ವಕೀಲರಿಂದ</u>

-ಪಾಟೀ ಸವಾಲಿಗಾಗಿ ಕಾಲಾಕಾಶ ಕೋರಿದ್ದು 1000/ ರೂ ಸಾಕ್ಷಿಯು ಭತ್ಯೆಯೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil) Deposition Sheets (R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 59/2016

ಪ್ರಾ.ಸಾ. 2 ಚಾ.ಸಾ 3

| | | |
|---|---|---|
| ಹೆಸರು | : | ಯಲ್ಲಪ್ಪ |
| ತಂದೆಯ ಹೆಸರು | : | ಸಾಬಣ್ಣ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಅರಕೇರಾ ಬಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 11-09-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನನಗೆ ಮೃತ ಸಣ್ಣಲಕ್ಷ್ಮಣನ ಪರಿಚಯ ಇದೆ. ಚಾಸಾ-2 ರವರ ಪರಿಚಯ ಇದೆ. ಚಾಸಾ-1 ರವರ ಪರಿಚಯ ಇತ್ತು ಸುಮಾರು 1 ವರ್ಷದಿಂದ ಅವರು ತೀರಿಕೊಂಡಿರುತ್ತಾರೆ. ಚಾಸಾ-29 ರವರ ಪರಿಚಯ ಇರುವುದಿಲ್ಲ.

2. ಈಗ 10 ವರ್ಷ್ದಿಂದ ಬೆಳಿಗ್ಗೆ 11.00 ಗಂಟೆಗೆ ಕರೆಯಿಸಿದ್ದರು. ನನ್ನ ಸಮಕ್ಷಮ ಹೆಣತೆಗೆದ ಪಂಚನಾಮೆಯನ್ನು ಮಾಡಿರುತ್ತಾರೆ, ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು **ನಿ.ಪಿ.1(ಎ)** ಎಂದು ಗುರುತಿಸಲಾಯಿತು. ಉಳಂಡಗೇರಾ ಗ್ರಾಮದ ಬೀಮಾ ನದಿಗೆ ಕರೆಯಿಸಿರುತ್ತಾರೆ. ಇದೇ ಜಾಗವೆಂದು ಯಾರು ತೋರಿಸಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನಿ.ಪಿ.1 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ನಿ.ಪಿ.2 ನ್ನು ನೋಡಿ ಗುರುತಿಸಿದ್ದು ಭೀಮಾ ನದಿಯ ತೀರದಲ್ಲಿ ತೆಗೆದಿರುತ್ತಾರೆ. ಸರ್ಕಾರಿ ಆಸ್ಪತ್ರೆಗೆ ನಮನ್ನು ಕರೆಯಿಸಿ ನಮ್ಮ ಸಮಕ್ಷಮ ಶವಪಂಚನಾಮೆ ಮಾಡಿರುತ್ತಾರೆ ಅದನ್ನು ಈಗಾಗಲೇ ನಿ.ಪಿ.3 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು **ನಿ.ಪಿ.3(ಎ)** ಎಂದು ಗುರುತಿಸಲಾಯಿತು. ಆ ಕಾಲಕ್ಕೆ 2

ಭಾವಚಿತ್ರ ತೆಗೆದಿದ್ದು ನಿ.ಪಿ.4 ಮತುತ 5 ಎಂದು ಗುರುತಿಸಲಾಗಿದೆ. ನಂತರ ನನ್ನನ್ನು ಎಲ್ಲಿಗೆ ಕರೆಯಿಸಿರುವುದಿಲ್ಲ. ಸಾಕ್ಷಿಗೆ ಇನ್ನೊಂದು ಪಂಚನಾಮೆಯನ್ನು ತೋರಿಸಲಾಗಿದ್ದು, ಮೃತನ ಮೈಮೇಲಿನ ಬಟ್ಟೆ ಪಂಚನಾಮೆಯನ್ನು ನಿ.ಪಿ.6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ನಿ.ಪಿ.1, 3, 6 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

3. ದಿಃ 19.12.2015 ರಂದು ಸಾಯಂಕಾಲ 4.45-5.15 ರವರೆಗೆ ನನ್ನನ್ನು ಚಾಸಾ-2 ರವರನ್ನು ಉಳಂಡಗೇರಾ ಗ್ರಾಮದ ಭೀಮಾ ನದಿಯ ನೀರಿನಲ್ಲಿ ನಮ್ಮನ್ನು ಕರೆಯಿಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಸದರಿ ಸ್ಥಳವನ್ನು ಚಾಸಾ-1 ಇವರು ತೋರಿಸಿದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸ್ಥಳದಲ್ಲಿ ಮು.ಮಾ.1 ನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಕಾಲಕ್ಕೆ ನಿ.ಪಿ.2 ರಂತೆ ಭಾವಚಿತ್ರವನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ದಿಃ 19.12.2015 ರಂದು ಸಾಯಂಕಾಲ 5.30- 7.00 ಗಂಟೆಯವೆರೆಗೆ ನನ್ನನ್ನು ಹಾಗೂ ಚಾಸಾ-2 ರವರನ್ನು ಉಳಂಡಗೇರಾ ಗ್ರಾಮದ ಭೀಮಾ ನದಿಯ ನೀರಿನ ಹತ್ತಿರ ಕರೆಯಿಸಿದರು ಎಂದರೆ ಸರಿಯಲ್ಲ. 4 ಫೀಟ ನೀರಿನ ಆಳದಲ್ಲಿ ಮೃತ ಸಣ್ಣಲಕ್ಷ್ಮಣನ ಶವ ಇತ್ತು ಎಂದರೆ ಸರಿಯಲ್ಲ ಸಾಕ್ಷಿದಾರರು ಆತನಿಗೆ ಕೊಲೆ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ಪಂಚನಾಮೆ ಮಾಡಿದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿ.ಪಿ.4 ಮತ್ತು 5 ರಂತೆ ಭಾವಚಿತ್ರಗಳನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

3. ದಿಃ 20.12.2016 ರಂದು ಬೆಳಿಗ್ಗೆ 9.30 – 10.00 ಗಂಟೆಯವರೆಗೆ ನನಗೆ ಮತ್ತು ಚಾಸಾ-3 ರವರ ಯಾದಗಿರಿಯ ಗ್ರಾಮೀಣ ಪೊಲೀಸ ಠಾಣೆಗೆ ಕರೆಯಿಸಿರುತ್ತಾರೆ ಎಂದರೆ ಸರಿ. ಚಾಸಾ-29 ರವರು ಮೃತ ಸಣ್ಣಲಕ್ಷ್ಮಣನ ಮೈಮೇಲೆ ಇದ್ದ 4 ಬಟ್ಟೆಗಳನ್ನು ನಮ್ಮ ಸಮಕ್ಷಮ ಹಾಜರುಪಡಿಸಿದ್ದ ಎಂದರೆ ಸರಿಯಲ್ಲ. ಒಂದು ನಿಲಿ ಬಣ್ಣದ ಜೀನ್ಸ ಪ್ಯಾಂಟನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ **ಮು.ಮಾ.2** ಒಂದು ನೀಲಿ ಮತ್ತು ನಾಶಿ ಕಲರಿನ ಶರ್ಟ **ಮು.ಮಾ.3,** ಒಂದು ಹಸಿರು ಬಣ್ಣದ ಟಿಶರ್ಟ **ಮು.ಮಾ.4,** ಒಂದು ಅಂಡರವೇರ್ **ಮು.ಮಾ.5** ಎಂದು ಗುರುತಿಸಲಾಯಿತು. ಬಹಳ ದಿವಸಗಳು ಆಗಿದ್ದರಿಂದ ಸಾಕ್ಷಿ 29 ರವರು ಹಾಜರುಪಡಿಸಿದರು ಎಂದರೆ ನೆನಪಿರುವುದಿಲ್ಲ ಎಂದರೆ ಸರಿಯಲ್ಲ.

4. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1, 2, 4 ಮತ್ತು 5 ನೇ ಆರೋಪಿತರ ಪರವಾಗಿ ಶ್ರೀ. ಸಿ.ಕೆ.ಹೆಚ್. ವಕೀಲರಿಂದ</u>

-ಪಾಟೀ ಸವಾಲಿಗಾಗಿ ಕಾಲಾಕಾಶ ಕೋರಿದ್ದು 1000/ ರೂ ಸಾಕ್ಷಿಯು ಭತ್ಯೆಯೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.